**ದಿಃ 26-03-2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮಧ್ಯಂತರ ಅರ್ಜಿ ಸಂಖ್ಯೆ 3 ರ ಮೇಲೆ ಆದ ಆದೇಶದ ಮೇರೆಗೆ ಸಾಕ್ಷಿಯ

**ಪಾಟೀ ಸವಾಲುಃ** 2 ನೇ ಎದುರುದಾರ ಪರ ವಕೀಲರಾದ ಶ್ರೀ ಕೆ ಎಸ್ ಎ ವಕೀಲರಿಂದ

ಅಪಘಾತದ ದಿವಸ ನಾನು ಹೆಲ್ಮೇಟ್ ಧರಿಸಿರಲಿಲ್ಲ ಎಂದರೆ ಸರಿ ಅಲ್ಲಾ. ಚಿನ್ಮಯ್ ಆಸ್ಪತ್ರೆಯಲ್ಲಿ ನಾನು ನನ್ನ ಮುಖದ ಎಡಭಾಗದ ದವಡೆಗೆ, ಕೈಗೆ, ಕಾಲಿಗೆ ಮತ್ತು ಎದೆಯ ಭಾಗಕ್ಕೆ ಆದಂತಹಾ ಗಾಯಕ್ಕೆ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಯಾವುದೇ ವೈದ್ಯರು ನನಗೆ ಅಂಗನ್ಯೂನ್ಯತೆ ಆಗಿತ್ತು ಅಂತ ಅಂಗನ್ಯೂನ್ಯತಾ ಪ್ರಮಾಣ ಪತ್ರ ನೀಡಿಲ್ಲ. ನನ್ನ ಚಿಕಿತ್ಸೆ ಪುರ್ಣಗೊಂಡಿದೆ. ಅಪಘಾತದಿಂದ ನನಗೆ ಯಾವುದೇ ಆದಾಯ ನಷ್ಟ ಆಗಿಲ್ಲ ಎಂದರೆ ಸರಿ ಅಲ್ಲಾ. ಮೋಟಾರು ಸೈಕಲು ನಾನು ಚಲಾಯಿಸುತ್ತಿರಲಿಲ್ಲ ನಾನು ಸಹ ಪ್ರಯಾಣಿಕನಾಗಿ ಪ್ರಯಾಣಿಸುತ್ತಿದ್ದೆ. ನನಗೆ ಆದಂತಹಾ ಗಾಯ ನಾನು ಹೆಲ್ಮೇಟ್ ಧರಿಸದೇ ಇದ್ದುದರಿಂದ ಆಗಿರುತ್ತದೆ ಎಂದರೆ ಸರಿ ಅಲ್ಲಾ. ಪೋಲೀಸರು ನನ್ನ ಹೇಳಿಕೆ ಪಡೆದುಕೊಂಡಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನನ್ನ ಪೌಷ್ಠಿಕ ಆಹಾರಕ್ಕೆ, ಪ್ರಯಾಣಕ್ಕೆ, ಔಷಧಿಗೆ ಅಷ್ಟು ಹಣ ಖರ್ಚು ಮಾಡಿಲ್ಲ ಎಂದರೆ ಸರಿ ಅಲ್ಲಾ.

**ಮರು ವಿಚಾರಣೆಃ** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**